## ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (IFA) ಪ್ರಾಜೆಕ್ಟ್ 560 ಗೆ ಅರ್ಜಿಗಳನ್ನು ಆಹ್ವಾನಿಸುತ್ತದೆ

**ಕೊನೆಯ ದಿನಾಂಕ: ಸೆಪ್ಟೆಂಬರ್ 21, 2026**

ಬೆಂಗಳೂರನ್ನು ಒಬ್ಬ ಕವಿಯ ಡೈರಿ, ಒಬ್ಬ ಕಲಾವಿದನ ಸ್ಟುಡಿಯೋ, ಒಬ್ಬ ಚಲನಚಿತ್ರ ನಿರ್ದೇಶಕನ ಸಂಕಲನದ ಮೇಜು, ಒಬ್ಬ ಪ್ರದರ್ಶಕನ ರಂಗಸ್ಥಳ ಎಂದು ಕಲ್ಪಿಸಿಕೊಳ್ಳಿ! ಹತ್ತು ಹಲವು ಬಗೆಯ ಸಮುದಾಯಗಳು, ಹೆಚ್ಚು ಕಣ್ಣಿಗೆ ಬೀಳದ ಸ್ಥಳಗಳು, ಬಹು-ಪದರದ ಇತಿಹಾಸಗಳು ಮತ್ತು ಸಾಮೂಹಿಕ ಆಕಾಂಕ್ಷೆಗಳಿಂದ ಹೊಮ್ಮುತ್ತಿರುವ ನಗರದ ಹೊಸ ಧ್ವನಿಗಳಿಗೆ ಕಿವಿಗೊಡಿ. ಸಮುದಾಯವಾಗಿ ನಮ್ಮ ಭವಿಷ್ಯವನ್ನು ನಾವು ಹೇಗೆ ಸೃಜನಾತ್ಮಕವಾಗಿ ಕಂಡುಕೊಳ್ಳುತ್ತೇವೆ ಎನ್ನುವ ಚಿಂತನೆ ನಿಮ್ಮಲ್ಲಿದ್ದರೆ, ಪ್ರಾಜೆಕ್ಟ್ 560 ನಾವೆಲ್ಲ ಸೇರಿ ಆಡುವ ಮೈದಾನವಾಗಿದೆ.

ಪ್ರಾಜೆಕ್ಟ್ 560 ಒಂದು ಕಲಾತ್ಮಕ ಪ್ರಚೋದನೆಯಾಗಿದ್ದು, ಇದು ಪರಿಚಿತ ಸಾಂಸ್ಕೃತಿಕ ಕೇಂದ್ರಗಳಾಚೆಗೆ, ವೇಗವಾಗಿ ವಿಸ್ತರಿಸುತ್ತಿರುವ ಮಹಾನಗರದ ಪರಿಧಿಯ ಕಡೆಗೆ, ಬಹುಪದರಗಳ ಗತಕಾಲ,, ವರ್ತಮಾನದ ಅವ್ಯವಸ್ಥೆಗಳು ಮತ್ತು ಕಲ್ಪಿತ ಭವಿಷ್ಯಗಳ ಮೂಲಕ ನೋಡಲು ಪ್ರೇರೇಪಿಸುತ್ತದೆ. ಈ ಕಾರ್ಯಕ್ರಮವು ಬೆಂಗಳೂರಿನ ಬಹುಭಾಷಾ ವಾಸ್ತವಗಳು, ಅದರ ಜಾತಿ, ಭಾಷೆ ಮತ್ತು ಲಿಂಗದ ಸಂಕೀರ್ಣ ಹಾಗೂ ಚಲನಶೀಲ ಸಂಬಂಧಗಳು , ಮತ್ತು ನಮ್ಮ ಪಟ್ಟಣ-ಪರಿಸರವನ್ನು (ಅರ್ಬನ್ ಎಕಾಲಜಿ) ರೂಪಿಸುವ ನಿರ್ಣಾಯಕ ಪರಿಸರ-ಸಂಕಥನಗಳ ಕುರಿತು ಸೂಕ್ಷ್ಮತೆಯೊಂದಿಗೆ ಹುಟ್ಟುವ ಕಲಾತ್ಮಕ, ಕ್ಯುರೇಟೋರಿಯಲ್ ಮತ್ತು ವಿದ್ವತ್ಪೂರ್ಣ ಉದ್ದೇಶವನ್ನು ಪೋಷಿಸುವ ಸಹವರ್ತಿ ಜಾಲವನ್ನು (ಪೀರ್ ನೆಟ್ವರ್ಕ್) ನಿರ್ಮಿಸಲು ಪ್ರಯತ್ನಿಸುತ್ತದೆ.

ಬೆಂಗಳೂರು ಹಿಡಿದಿಡಲು ಕಷ್ಟಕರವಾದ ವೇಗದಲ್ಲಿ ವಿಸ್ತಾರವಾಗುತ್ತಿದೆ. ನಗರದ ಪ್ರಮುಖ ಕಲಾತ್ಮಕ ಶಕ್ತಿಯು ಔಪಚಾರಿಕ ಅಥವಾ ಸಾಂಪ್ರದಾಯಿಕ ಸಾಂಸ್ಕೃತಿಕ ಕೇಂದ್ರಗಳಿಗೆ ಸೀಮಿತವಾಗಿಲ್ಲ. ಬೆಂಗಳೂರಿನ ಸೃಜನಶೀಲ ಚೈತನ್ಯವು ಚಲನಶೀಲವಾಗಿದೆ. ಇದು ಅರ್ಬನ್ ವಿಲೇಜ್, ವಲಸಿಗರ ನೆಲೆಗಳು, ಓದುಗರ ಗುಂಪುಗಳು, ಪೆನ್ಸಿಲ್ ಜಾಮರ್‌ಗಳು ಮತ್ತು ಅನೌಪಚಾರಿಕ ಸೃಜನಶೀಲ ಇಕಾನಮಿಗಳಂತಹ ಅನಿರೀಕ್ಷಿತ ಮೂಲೆಗಳಲ್ಲಿ ಬೆಳೆಯುತ್ತಿದೆ. ಪ್ರಾಜೆಕ್ಟ್ 560ಯ ಈ ಸಂಚಿಕೆ ಬೆಂಗಳೂರು ನಗರದ ಇತಿಹಾಸಗಳು, ಬದುಕಿನ ಹೆಜ್ಜೆಗುರುತುಗಳುಳ್ಳ ಸ್ಥಳಗಳು (ಲಿವ್ಡ್ ಸ್ಪೇಸ್) ಮತ್ತು ಕಲ್ಪಿತ ಭವಿಷ್ಯಗಳೊಂದಿಗೆ ತೊಡಗಿಸಿಕೊಳ್ಳಲು ಸಾಮೂಹಿಕವಾಗಿ ಒಂದು ಜಾಗವನ್ನು ರೂಪುಗೊಳಿಸಲು, ಬೆಂಗಳೂರು ನಗರದ ತಜ್ಞರೊಂದಿಗೆ, ಆಳವಾದ, ಇನ್ಕ್ಯುಬೇಷನ್ ಕೇಂದ್ರಿತ ಪ್ರಯಾಣಕ್ಕೆ ಕರೆ ನೀಡುತ್ತದೆ.

ಕ್ಯುರೇಟೆಡ್ ನಡಿಗೆಗಳು; ರಂಗಭೂಮಿ, ನೃತ್ಯ ಮತ್ತು ಸಂಗೀತ ಪ್ರದರ್ಶನಗಳು; ಇನ್‌ಸ್ಟಾಲೇಶನ್‌ಗಳು; ಪ್ರದರ್ಶನಗಳು; ಸಮುದಾಯ ಆಧಾರಿತ ಕಾರ್ಯಕ್ರಮಗಳು; ಲೆನ್ಸ್ ಆಧಾರಿತ ಅಭ್ಯಾಸಗಳು; ಆಟಗಳು; ಕಾರ್ಯಾಗಾರಗಳು; ಮತ್ತು ಪ್ರಕಟಣೆಗಳಿಗೆ ಕಾರಣವಾಗುವಂತಹ ಯೋಜನಾ ಕಲ್ಪನೆಗಳನ್ನು ನಾವು ಆಹ್ವಾನಿಸುತ್ತೇವೆ.

**ಇನ್ಕ್ಯುಬೇಷನ್ (ಲ್ಯಾಬ್) ಕೇಂದ್ರಿತ ಪ್ರಯಾಣ**

ಸಂಪೂರ್ಣವಾಗಿ ರೂಪುಗೊಂಡ ಯೋಜನೆಯ ಅನುಷ್ಠಾನವನ್ನು ಉದ್ದೇಶವಾಗಿ ಹೊಂದಿದ್ದ ಪ್ರಾಜೆಕ್ಟ್ 560ಯ ಹಿಂದಿನ ಆವೃತ್ತಿಗಳಂತಲ್ಲದೆ, ಈ ಮರು-ಪ್ರಾರಂಭವು ಇನ್ಕ್ಯುಬೇಷನ್ (ಪೋಷಣೆ) ಅಂಶವನ್ನು ಮುನ್ನೆಲೆಗೆ ತರುತ್ತದೆ. ಬೆಂಗಳೂರನ್ನು ಒಂದು ನಗರವೆಂಬ ಕಲ್ಪನೆಯ ಕುರಿತು ಚಿಂತಿಸುವ ಸಮಾನಮನಸ್ಕ ಸೃಜನಶೀಲ ತಜ್ಞರ ತಂಡದೊಂದಿಗೆ ಸಹಯೋಗ-ಸಂಭಾಷಣೆಗಳ ಮೂಲಕ ಸೃಜನಶೀಲ ಕಲ್ಪನೆಗಳನ್ನು ಅಭಿವೃದ್ಧಿಪಡಿಸಲು ಬಯಸುವ ಬೆಂಗಳೂರು ಮೂಲದ ಕಲಾವಿದರು ಮತ್ತು

ಸಂಶೋಧಕರನ್ನು IFA ಹುಡುಕುತ್ತಿದೆ. ಆಸಕ್ತರು ಯೋಜನಾ ಪ್ರಸ್ತಾವನೆಯೊಂದಿಗೆ ಅರ್ಜಿ ಸಲ್ಲಿಸಬಹುದು. ಆಯ್ಕೆಯಾದ ಅರ್ಜಿದಾರರು ತಮ್ಮ ಯೋಜನೆಗಳ ಅನುಷ್ಠಾನಕ್ಕೆ ಮೊದಲು ಆಳವಾದ ಇನ್ಕ್ಯುಬೇಷನ್ ಲ್ಯಾಬ್‌ಅನ್ನು ಪ್ರವೇಶಿಸುತ್ತಾರೆ.

ಇನ್ಕ್ಯುಬೇಷನ್ ಲ್ಯಾಬ್ ಅನ್ನು ನವೆಂಬರ್‌ನಲ್ಲಿ ಎರಡು ವಾರಗಳ ಅವಧಿಯಲ್ಲಿ 10 ದಿನಗಳವರೆಗೆ ಆಹ್ವಾನಿತ ತಜ್ಞರೊಂದಿಗೆ IFA ಮುನ್ನಡೆಸುತ್ತದೆ. ಈ ಲ್ಯಾಬ್‌ನಲ್ಲಿ ನೆರೆಹೊರೆಯ ಸಮುದಾಯದೊಂದಿಗೆ ಕೆಲಸ ಮಾಡಲು ಪ್ರಯತ್ನ (ನೈಬರ್ಹೂಡ್ ಇಂಟರ್ವೆನ್ಶನ್), ನಗರವಾದಿ ತುಡಿತಗಳು, ವರ್ಷಾವಧಿ ಕ್ಯುರೇಟೋರಿಯಲ್ ದೃಷ್ಟಿಕೋನಗಳು ಅಥವಾ ನಗರದ ಕುರಿತಾದ ಕಲಾತ್ಮಕ ಸಂಶೋಧನೆಗಳ ಬಗ್ಗೆ ಕಲ್ಪನೆಗಳನ್ನು ಶ್ರೀಮಂತಗೊಳಿಸುವ ಸಂವಾದಗಳು, ಅನ್ವೇಷಣೆಗಳು, ನಡಿಗೆಗಳು (ವಾಕ್ಸ್), ಕಾರ್ಯಾಗಾರಗಳು ಮತ್ತು ಸಹವರ್ತಿ -ವಿನಿಮಯಗಳು(ಪೀರ್ ಎಕ್ಸ್ಚೇಂಜ್) ಸೇರಿರುತ್ತವೆ.

ಯೋಜನೆಗಳ ಫಲಿತಾಂಶಗಳು ವಿವಿಧ ರೀತಿಯಲ್ಲಿ ಗ್ರಾಫಿಕ್ ಸಂಕಥನಗಳು, ಅನಿಮೇಷನ್‌ಗಳು, ಕಾಲ್ಪನಿಕವಲ್ಲದ ಸೃಜನಾತ್ಮಕ ಸಾಹಿತ್ಯ, ಸಂಗೀತದ ಅನ್ವೇಷಣೆಗಳು(ಎಕ್ಸ್ಪ್ಲೋರೇಶನ್ಸ್), ಪ್ರದರ್ಶನ ಕಲೆಗಳು, ಉಪನ್ಯಾಸಗಳು, ಪ್ರದರ್ಶನಗಳು, ಸೈಟ್-ರೆಸ್ಪಾನ್ಸಿವ್ ಇನ್‌ಸ್ಟಾಲೇಶನ್‌ಗಳು, ಕ್ರಿಯೇಟಿವ್ ಕೋಡಿಂಗ್ ಬೂಟ್‌ಕ್ಯಾಂಪ್‌ಗಳು, ಸಿಂಥ್‌ಜಾಮ್ಮಿಂಗ್, ಕಲಾತ್ಮಕ ಸಂಶೋಧನಾ ಮೊನೊಗ್ರಾಫ್‌ಗಳು(ಪುಸ್ತಕ), ಎಸ್ಸೇ ಫ಼ಿಲ್ಮ್ಸ್ ಅಥವಾ ಅಂತರಶಿಸ್ತೀಯ ಕೆಲಸಗಳನ್ನು ಒಳಗೊಂಡಿರಬಹುದು. ಈ ಫಲಿತಾಂಶಗಳ ಪ್ರಸ್ತುತಿಯು ಸಾರ್ವಜನಿಕವಾಗಿ ಮತ್ತು ಭೌತಿಕ ರೂಪದಲ್ಲಿರಬೇಕು, ಅಗತ್ಯವಿದ್ದರೆ ಭಾಗಶಃ ವರ್ಚುವಲ್ ಅಂಶಗಳನ್ನು ಒಳಗೊಂಡಿರಬಹುದು.

**ಯೋಜನೆಯ ಅವಧಿ**

8 ತಿಂಗಳವರೆಗೆ

**ಬಜೆಟ್**

ಗರಿಷ್ಠ ₹ 4,00,000/- ವರೆಗೆ

**ಯಾರು ಅರ್ಜಿ ಸಲ್ಲಿಸಬಹುದು?**

ನಾವು ಈ ಕೆಳಗಿನವುಗಳನ್ನು ಒಳಗೊಂಡಂತೆ ವಿಭಿನ್ನ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತೇವೆ.:

- ಸಂಗೀತ, ಶಬ್ದ, ಬರಹ, ನೃತ್ಯ, ಚಲನೆ, ರಂಗಭೂಮಿ, ಬೊಂಬೆಯಾಟ, ಕಥೆ ಹೇಳುವಿಕೆ, ಮಾಯಾಜಾಲ, ಸರ್ಕಸ್ ಮತ್ತು ಇತರ ಪ್ರದರ್ಶನ ಕಲೆಗಳಲ್ಲಿ ಕೆಲಸ ಮಾಡುವ ಪ್ರದರ್ಶನ ಕಲಾವಿದರು
- ಚಲನಚಿತ್ರ (ಕಾಲ್ಪನಿಕವಲ್ಲದ ಮತ್ತು ಕಾಲ್ಪನಿಕ), ಅನಿಮೇಷನ್, ಛಾಯಾಗ್ರಹಣ, ಇನ್‌ಸ್ಟಾಲೇಷನ್, ಹೊಸ ಮಾಧ್ಯಮ, ಕ್ರಿಯೇಟಿವ್ ಕೋಡಿಂಗ್, ಕೃತಕ ಬುದ್ಧಿಮತ್ತೆ (ಏ ಐ), ರೋಬೋಟಿಕ್ಸ್, ಸಂವಾದಾತ್ಮಕ ಕಲೆಗಳು(ಇಂಟರಾಕ್ಟಿವ್ ಆರ್ಟ್), ಗೇಮಿಂಗ್/ ಕಾನ್ಸೆಪ್ಟ್ ಆರ್ಟ್, ಚಿತ್ರಕಲೆ, ಶಿಲ್ಪಕಲೆ, ಮುದ್ರಣಕಲೆ, ಕಾಮಿಕ್ ಪುಸ್ತಕಗಳು, ಗ್ರಾಫಿಕ್ ಸಂಕಥನ ಸೇರಿದಂತೆ ಎಲ್ಲಾ ದೃಶ್ಯ ಕಲೆಗಳಲ್ಲಿ ಕೆಲಸ ಮಾಡುವ ದೃಶ್ಯ ಕಲಾವಿದರು
- ಕ್ಯುರೇಟರ್‌ಗಳು, ವಿಶೇಷವಾಗಿ ಗ್ಯಾಲರಿ ಸಂದರ್ಭದ ಹೊರಗೆ ಕೆಲಸ ಮಾಡುವವರು

- ಕವಿಗಳು, ಕಾದಂಬರಿಕಾರರು, ಸಣ್ಣ ಕಥೆ ಬರಹಗಾರರು, ನಾಟಕಕಾರರು, ಚಲನಚಿತ್ರದ ಚಿತ್ರಕಥೆ ಬರಹಗಾರರು, ಕಾಮಿಕ್ಸ್ ಬರಹಗಾರರು, ಗೇಮ್ ಬರಹಗಾರರು, ಕಾಲ್ಪನಿಕವಲ್ಲದ ಸೃಜನಾತ್ಮಕ ಬರಹಗಾರರು - ಹೀಗೆ ಸಾಹಿತ್ಯ ಕಲೆಗಳಲ್ಲಿ ಕೆಲಸ ಮಾಡುವವರು
- ಅಂತರ್ಶಿಸ್ತೀಯ ಕೆಲಸದಲ್ಲಿ ತೊಡಗಿರುವವರು
- ಬೆಂಗಳೂರಿನ ನಿವಾಸಿಗಳು

**ಅರ್ಜಿ ಕಳುಹಿಸಲು ಮಾರ್ಗಸೂಚಿಗಳು:**

- ಒಬ್ಬ ಕಲಾವಿದರಾಗಿ ನಿಮ್ಮ ಪ್ರಸ್ತುತ ಕಲಾ ಅಭ್ಯಾಸ, ಕಾಳಜಿಗಳು ಮತ್ತು ಆಸಕ್ತಿಗಳು
- ಬೆಂಗಳೂರಿನ ಬಗ್ಗೆ ನಿರ್ದಿಷ್ಟವಾಗಿ ಅದರ ಪರಿಧಿಗಳು, ದೈನಂದಿನ ಬಹುಭಾಷಾ ವಾಸ್ತವಗಳು, ಪರಿಸರ-ಸಂಕಥನಗಳ ಮೇಲೆ ಕೇಂದ್ರೀಕರಿಸಿದಂತೆ ನಿಮ್ಮ ಕಲಾತ್ಮಕ ಕಾಳಜಿಗಳು ಅಥವಾ ಸಂಶೋಧನಾ ಪ್ರಶ್ನೆಗಳು
- ಬೆಂಗಳೂರಿನಲ್ಲಿ ನೀವು ತೊಡಗಿಸಿಕೊಳ್ಳಲು ಉದ್ದೇಶಿಸಿರುವ ಸಂಭಾವ್ಯ ಪಾಲುದಾರರು, ಸಮುದಾಯಗಳು ಅಥವಾ ನಗರ ಪ್ರದೇಶಗಳು ಸೇರಿದಂತೆ ಯೋಜನೆಯ ಆರಂಭಿಕ ವಿವರಗಳು
- ಚಟುವಟಿಕೆಗಳ ವಿವರವಾದ ಸಮಯಸೂಚಿ
- ತಾತ್ಕಾಲಿಕ ಹಣಕಾಸು ಯೋಜನೆಯ ವಿವರ
- ಪೋರ್ಟ್‌ಫೋಲಿಯೊಗಳು, ಬರಹಗಳು, ಛಾಯಾಚಿತ್ರಗಳು, ಅಥವಾ ಹಿಂದಿನ ಕೆಲಸದ ಆಡಿಯೋ/ವಿಡಿಯೋ ರೆಕಾರ್ಡಿಂಗ್‌ಗಳಂತಹ ಪೂರಕ ಸಾಮಗ್ರಿಗಳು ಸೇರಿದಂತೆ, ಈ ಅರ್ಜಿಗೆ ಸಂಬಂಧಿಸಿದ ಹಿಂದಿನ ಕೆಲಸದ ಉದಾಹರಣೆಗಳು
- ನಿಮ್ಮ ಪ್ರಸ್ತುತ ಅಂಚೆ ವಿಳಾಸ, ಫೋನ್ ಸಂಖ್ಯೆ ಮತ್ತು ಇಮೇಲ್ ಐಡಿ ಇರುವ ನಿಮ್ಮ ಸಿ.ವಿ.
- ನಿಮ್ಮ ಅಂತಿಮ ಅರ್ಜಿಯನ್ನು ಒಂದೇ ಮಿಂಚಂಚೆಯಲ್ಲಿ ಜಾನ್ ಜೇವಿಯರ್ಸ್ ಅವರಿಗೆ, john@indiaifa.org ವಿಳಾಸಕ್ಕೆ, Project Proposal for Project 560 ಎಂದು ವಿಷಯ (ಸಬ್ಜೆಕ್ಟ್) ನಮೂದಿಸಿ ಕಳುಹಿಸಿ
- ನಿಮ್ಮ ಪ್ರಸ್ತಾವನೆಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು ಮತ್ತು ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಜಾನ್ ಜೇವಿಯರ್ಸ್ ಅವರಿಗೆ, john@indiaifa.org ಬರೆಯಿರಿ

ನೀವು ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಪ್ರಸ್ತಾವನೆಯನ್ನು ಕಳುಹಿಸಬಹುದು. ಐಎಫ್‌ಎ ಇಂಗ್ಲಿಷ್ ಹೊರತಾದ ಭಾರತೀಯ ಭಾಶೆಗಳಲ್ಲಿ ಯೋಜನೆಗಳನ್ನು ಪ್ರೋತ್ಸಾಹಿಸುತ್ತದೆ.

**ಅರ್ಹತೆ**

- ಭಾರತೀಯ ನಾಗರಿಕರು ಮಾತ್ರ ಅರ್ಜಿ ಸಲ್ಲಿಸಬಹುದು. ಇದರಲ್ಲಿ PIO (ಭಾರತೀಯ ಮೂಲದ ವ್ಯಕ್ತಿಗಳು) ಮತ್ತು OCI (ವಿದೇಶಿ ಭಾರತೀಯ ಪೌರತ್ವ) ಕಾರ್ಡ್ ಹೊಂದಿರುವವರು ಸೇರಿಲ್ಲ.
- ಅರ್ಜಿದಾರರು PAN ಕಾರ್ಡ್ ಮತ್ತು ಗುರುತು ಹಾಗೂ ಪೌರತ್ವದ ಪುರಾವೆಗಾಗಿ ಈ ಕೆಳಗಿನವುಗಳಲ್ಲಿ ಒಂದನ್ನು ಹೊಂದಿರಬೇಕು – ಭಾರತೀಯ ಪಾಸ್‌ಪೋರ್ಟ್ ಅಥವಾ ಆಧಾರ್ ಕಾರ್ಡ್ ಅಥವಾ ಮತದಾರರ ಗುರುತಿನ ಚೀಟಿ..
- ವ್ಯಕ್ತಿಗಳು ಮಾತ್ರ ಅರ್ಜಿ ಸಲ್ಲಿಸಬಹುದು. ಯಾವುದೇ ರೀತಿಯ ಸಂಸ್ಥೆಗಳು ಅರ್ಜಿ ಸಲ್ಲಿಸುವಂತಿಲ್ಲ.

- ಯೋಜನೆಯಲ್ಲಿ ಸಹಯೋಗಿಗಳು ಇದ್ದರೆ, ಅವರು ಕೂಡ ಭಾರತೀಯ ಪ್ರಜೆಗಳಾಗಿರಬೇಕು.
- ಯೋಜನೆಯ ಸಂಪೂರ್ಣ ಅವಧಿಯಲ್ಲಿ ನೀವು ಬೆಂಗಳೂರಿನಲ್ಲಿ ನೆಲೆಸಿರಬೇಕು.
- ಐಎಫ್ಎ ಜೊತೆ ಹಣಕಾಸು ಸಂಬಂಧಿತ ಸಮಸ್ಯೆಗಳಿರುವವರು ಅರ್ಹರಲ್ಲ
- IFAಯ ಹಿಂದಿನ ಅನುದಾನದಿಂದ ಒಪ್ಪಿದ ಫಲಿತಾಂಶಗಳನ್ನು IFA ಗೆ ಸಲ್ಲಿಸಲು ವಿಫಲರಾದ ವ್ಯಕ್ತಿಗಳು ಅರ್ಹರಲ್ಲ.
- ಈ ಹಿಂದೆ ಐಎಫ್ಎ ಇಂದ ಅರ್ಜಿ ಹಾಕಲು ನಿರ್ಬಂಧಿಸಿದ ಪತ್ರ ಪಡೆದವರು ಅರ್ಹರಲ್ಲ
- ಪ್ರಸ್ತುತ IFA ಜಾರಿಗೊಳಿಸುತ್ತಿರುವ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಅರ್ಜಿ ಸಲ್ಲಿಸಲು ಅರ್ಹರಲ್ಲ.
- ಜಂಟಿ ಖಾತೆಯಿದ್ದರೆ ಒಂದಕ್ಕಿಂತ ಹೆಚ್ಚು ಜನ ಅರ್ಜಿ ಹಾಕಬಹುದು; ಇಲ್ಲದಿದ್ದರೆ ಒಬ್ಬರು ಅರ್ಜಿ ಹಾಕಿ ಇತರರನ್ನು ಸಹಯೋಗಿಗಳಾಗಿ ಸೇರಿಸಬಹುದು.

**ಆಯ್ಕೆಯ ಪ್ರಕ್ರಿಯೆ:**

ಕೊನೆಯ ಸುತ್ತಿಗೆ ಆಯ್ಕೆಯಾದ ಪ್ರಸ್ತಾವನೆಗಳನ್ನು ಬಾಹ್ಯ ತಜ್ಞರ ಆಯ್ಕೆ ಸಮಿತಿ ಮೌಲ್ಯಮಾಪನ ಮಾಡುತ್ತದೆ. ಇದಕ್ಕಾಗಿ ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಈ ಸಮಿತಿಯ ಮುಂದೆ ಪ್ರತಿಪಾದಿಸಬೇಕಾಗುತ್ತದೆ. ಇಂಕ್ಯುಬೇಶನ್ ಲ್ಯಾಬ್‌ಗೆ ಹಾಗೂ ಯೋಜಾನಾ ಅನುಷ್ಠಾನಕ್ಕೆ ಆಯ್ಕೆಯಾದ ಯೋಜನೆಗಳನ್ನು ಅಕ್ಟೋಬರ್ 2026ರಲ್ಲಿ ಘೋಷಿಸಲಾಗುವುದು.
**ಆಯ್ಕೆಯಾದ ಎಲ್ಲ ಯೋಜನೆಗಳನ್ನೂ ಐ ಎಫ್ ಏ ಸ್ವತಃ ಕಾರ್ಯಗತಗೊಳಿಸುತ್ತದೆ.**

ಪ್ರಮುಖ ದಿನಾಂಕಗಳು

- ಪ್ರಶ್ನೆಗಳು ಮತ್ತು ಕರಡು ಆಲೋಚನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **ಸೆಪ್ಟೆಂಬರ್ 11, 2026**
- ಅಂತಿಮ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **ಸೆಪ್ಟೆಂಬರ್ 21, 2026**
- ಇನ್‌ಕ್ಯುಬೇಷನ್ ಲ್ಯಾಬ್‌ಗೆ ಆಯ್ಕೆಯಾದ ಯೋಜನೆಗಳ ಘೋಷಣೆ: **ಅಕ್ಟೋಬರ್ 2026**
- ಯೋಜನೆ ಪ್ರಾರಂಭ ದಿನಾಂಕ: **ನವೆಂಬರ್ ಆರಂಭ**
- ಇನ್‌ಕ್ಯುಬೇಷನ್ ಲ್ಯಾಬ್ ಹಂತ: **ನವೆಂಬರ್ 16–27, 2026**

***ಅಂತಿಮವಾಗಿ ಆಯ್ಕೆಯಾದ ಕಲಾವಿದರು ಇನ್‌ಕ್ಯುಬೇಷನ್ ಲ್ಯಾಬ್‌ನ ಸಂಪೂರ್ಣ ಅವಧಿಯಲ್ಲಿ ವೈಯಕ್ತಿಕವಾಗಿ ಹಾಜರಿರಬೇಕು.***

***ಐ ಎಫ್ ಎ ಮಕ್ಕಳನ್ನೊಳಗೊಂಡಂತೆ ಎಲ್ಲರಿಗೂ ಬೆಂಬಲ, ಗೌರವ, ರಕ್ಷಣೆ ನೀಡುವ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಬದ್ಧವಾಗಿದೆ. ಎಲ್ಲ ಅರ್ಜಿದಾರರೂ ಇದಕ್ಕೆ ಬದ್ಧವಾಗಿದ್ದು, ಇದನ್ನು ಸದಾ ಎತ್ತಿಹಿಡಿಯಬೇಕು.***

**ನಮ್ಮ 560. ನಮ್ಮ ಪ್ರಾಜೆಕ್ಟ್. ನಮ್ಮ ಊರು.**